# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/340/12-13

ದಿನಾಂಕ :05-08-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀ ಜಿ. ನಾಗೇಂದ್ರಪ್ಪ ತಂದೆ ಗೊಡಸಲಹಳ್ಳಿ ರಾಮಯ್ಯ, ವಣೇನೂರು ಗ್ರಾಮ, ಬಳ್ಳಾರಿ ತಾಲ್ಲೂಕು<br><br>**(ಶ್ರೀ ಡಿ. ಮಲ್ಲಯ್ಯ, ವಕೀಲರು, ಬಳ್ಳಾರಿ)** | 1. ತಹಶೀಲ್ದಾರರು, ಬಳ್ಳಾರಿ<br>2. ಕಂದಾಯ ನಿರೀಕ್ಷಕರು, ಮೋಕಾ<br>3. ಗ್ರಾಮಲೆಕ್ಕಾಧಿಕಾರಿಗಳು, ವಣೇನೂರು<br>4. ವಿರುಪಾಕ್ಷ ಗೌಡ ತಂದೆ ಹಿರೇದೊಡ್ಡನಗೌಡ<br>5. ಚಿಕ್ಕನಗೌಡ ತಂದೆ ಹಿರೇದೊಡ್ಡನಗೌಡ<br>6. ಶ್ರೀ ವೀರೇಶಗೌಡ ತಂದೆ ಹಿರೇದೊಡ್ಡನಗೌಡ,<br>7)ಚಂದ್ರೇ ಗೌಡ ತಂದೆ ವೀರನ ಗೌಡ<br>ವಣೇನೂರು ಗ್ರಾಮ, ಬಳ್ಳಾರಿ ತಾಲ್ಲೂಕು |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ವಣೇನೂರು | 48/8 ಪೈಕಿ | 0.12.50 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು ಮೋಕಾ ಇವರ ಎಂ ಆರ್ ನಂ H8/12-13 ದಿನಾಂಕ 18-08-2012 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 04-12-2012, 10-12-2013, 27-12-2013, 15-04-2016, ಮತ್ತು05-08-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಅಪೀಲುದಾರರ ವಕೀಲರು ದಿನಾಂಕ: 05-08-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ವಣೇನೂರು ಗ್ರಾಮದ ಸ.ನಂ 48/8 ಪೈಕಿ ವಿಸ್ತೀರ್ಣ: 0.12.50 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ಮೋಕಾ ಇವರ ಎಂ ಆರ್ ನಂ H8/12-13 ದಿನಾಂಕ 18-08-2012 ರ ಆದೇಶವನ್ನು ರದ್ದುಗೊಳಿಸಿ ಅಪೀಲುದಾರರ ನೊಂದಾಯಿತ ಕ್ರಯಪತ್ರ 2245/98-99 ದಿನಾಂಕ 05-09-2016 ರಂತೆ ಸ.ನಂ 48/8 (ಪೈಕಿ) ರ ಒಟ್ಟು ವಿಸ್ತೀರ್ಣ 1.00 ಜಮೀನಿನಲ್ಲಿ 0.12.50 ಜಮೀನನ್ನು ಮನವಿದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಿಕೊಡುವಂತೆ ಕೋರಿರುತ್ತಾರೆ.

ಮುಂದುವರೆದು ಪ್ರಕರಣವನ್ನು ಪರಿಶೀಲಿಸಲಾಗಿ , ಪ್ರತಿವಾದಿ 4 ರಿಂದ 7 ರವರು ಮೇಲ್ಮನವಿದಾರರ ಹೆಸರಿಗೆ ವಿಸ್ತೀರ್ಣ 0.12.50 ಜಮೀನನ್ನು ಬರೆದುಕೊಟ್ಟಿದ್ದು ಕಂಡುಬರುತ್ತದೆ, ಹಾಗೂ ಪ್ರತಿವಾದಿಗಳು ವಿಚಾರಣೆಗೆ ಒಮ್ಮೆಯೂ ಹಾಜರಾಗಿರುವುದಿಲ್ಲ ಮತ್ತು ತಕರಾರು ಸಲ್ಲಿಸಿರುವುದಿಲ್ಲ ಕಾರಣ ಸದರಿ ಜಮೀನಿಗೆ ಸಂಬಂಧಿಸಿದಂತೆ ಈ ಕೆಳಕಂಡ ಆದೇಶ.

ಮುಂದಿನ ಪುಟಕೆ.